**ಕರ್ನಾಟಕ ಸರ್ಕಾರ**

**ತೋಟಗಾರಿಕೆ ಇಲಾಖೆ**

# 2018 – 2019 ನೇ ಸಾಲಿನ ತೋಟಗಾರಿಕೆ ತರಬೇತಿಗೆ ಅರ್ಜಿ

**2 ಕಲರ್ ಪಾಸಪೋರ್ಟ್ ಪೋಟೊ**

| | | |
|---|---|---|
| 1 | ಅಭ್ಯರ್ಥಿಯ ಹೆಸರು | |
| 2 | ತಂದೆಯ ಹೆಸರು<br>(ತಂದೆ ಇಲ್ಲದಿದ್ದಲ್ಲಿ ತಾಯಿ ಅಥವಾ ಪೋಷಕರ ಹೆಸರು) | |
| 3 | ವರ್ಗ :- ಪ.ಜಾ:<br>ಪ.ಪಂ:<br>ಸಾಮಾನ್ಯ/ಇತರೆ:<br>(ಅಭ್ಯರ್ಥಿಯು ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ್ದರೆ ಆಯಾ ವರ್ಗದ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ಸರ್ಟಿಫಿಕೇಟ್ ಲಗತ್ತಿಸಬೇಕು) | |
| 4 | ಲಿಂಗ :- ಹೆಣ್ಣು/ಗಂಡು | |
| 5 | ಅಭ್ಯರ್ಥಿಯ ಖಾಯಂ ಅಂಚೆ ವಿಳಾಸ | |
| 6 | ಹುಟ್ಟಿದ ದಿನಾಂಕ ಮತ್ತು ವಯಸ್ಸು | |
| 7 | ಎಸ್.ಎಸ್.ಎಲ್.ಸಿ.ಯಲ್ಲಿ ಪರೀಕ್ಷೆಯಲ್ಲಿ ಪಡೆದ ಅಂಕಗಳು:<br>{ಅಭ್ಯರ್ಥಿಯು ತೇರ್ಗಡೆಯಾಗಿರುವ ಅಂಕಪಟ್ಟಿ ಲಗತ್ತಿಸಬೇಕು. (ಒಂದಕ್ಕಿಂತ ಹೆಚ್ಚಿನ ಪ್ರಯತ್ನಗಳಲ್ಲಿ ತೇರ್ಗಡೆಯಾಗಿರುವವರು ಕ್ರೂಢೀಕೃತ ಅಂಕಪಟ್ಟಿ ಲಗತ್ತಿಸಬೇಕು. ಪ್ರಯತ್ನವಾರು ಪಡೆದಿರುವ ಅಂಕಪಟ್ಟಿ ಒಪ್ಪಲಾಗದು)} | ಒಟ್ಟು ಅಂಕ:<br>ಪಡೆದ ಅಂಕ:<br>ಶೇ.ವಾರು: |
| 8 | ಅಭ್ಯರ್ಥಿಯ ತಂದೆ, ತಾಯಿ ಅಥವಾ ಪೋಷಕರ ಜಮೀನಿನ ವಿವರ, ಪಹಣಿ (RTC) ನೀಡುವುದು.<br>(ಇದರಲ್ಲಿ ತಂದೆ/ತಾಯಿ ಇಲ್ಲದಿದ್ದ ಪಕ್ಷದಲ್ಲಿ ಅಭ್ಯರ್ಥಿಗೂ ಜಮೀನು ಹೊಂದಿರುವವರಿಗೂ ಇರುವ ಸಂಬಂಧವನ್ನು ಗ್ರಾಮ ಲೆಕ್ಕಾಧಿಕಾರಿಯವರಿಂದ ದೃಢೀಕರಣ ಪತ್ರ ನೀಡುವುದು) | (see table below) |
| 9 | ಅಭ್ಯರ್ಥಿಯು ತರಬೇತಿಗೆ ಸೇರುವ ಉದ್ದೇಶ | |
| 10 | ಇಂಡಿಯನ್ ಪೋಸ್ಟಲ್ ಆರ್ಡರ್ (IPO)/ ಡಿಮ್ಯಾಂಡ್ ಡ್ರಾಫ್ಟ್ (DD) ವಿವರಗಳು | IPO /DD ಸಂಖ್ಯೆ:<br>ದಿನಾಂಕ:<br>ಮೌಲ್ಯ: |

| ಕ್ರ. ಸಂ. | | ಸರ್ವೆ ನಂಬರ್ | ವಿಸ್ತೀರ್ಣ |
|---|---|---|---|
| 1. | ತರಿ | | |
| 2. | ಖುಷ್ಕಿ | | |
| 3. | ಬಾಗಾಯ್ತು | | |

ಮಾನ್ಯರೆ,

2018ನೇ ಸಾಲಿನ ಮೇ ತಿಂಗಳಿನಲ್ಲಿ ಪ್ರಾರಂಭವಾಗುವ ತೋಟಗಾರಿಕೆ ತರಬೇತಿಗೆ ಪ್ರವೇಶ ಕೋರಿ ನನ್ನ ಮಗ/ ಮಗಳಾದ .............................................. ರವರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ತರಬೇತಿ ಕಾಲದಲ್ಲಿ ತರಬೇತಿಯ ಹಾಗೂ ವಿದ್ಯಾರ್ಥಿ ನಿಲಯದ ಎಲ್ಲಾ ನಿಯಮಗಳನ್ನು ನನ್ನ ಮಗ/ಮಗಳು ಪರಿಪಾಲಿಸುತ್ತಾರೆಂದೂ, ಒಂದು ವೇಳೆ ಅವರಿಂದ ನಿಯಮಗಳ ಉಲ್ಲಂಘನೆಯಾದಲ್ಲಿ ಅದಕ್ಕೆ ತಗಲುವ ನಷ್ಟಗಳಿಗೆ ನಾನು ಹೊಣೆಯಾಗುತ್ತೇನೆಂದು ಈ ಮೂಲಕ ಒಪ್ಪಿರುತ್ತೇನೆ.

ಅಭ್ಯರ್ಥಿಯ ತಂದೆ/ತಾಯಿ ಅಥವಾ
ಪೋಷಕರ ಸಹಿ (ತಂದೆ/ತಾಯಿ ಇಲ್ಲದಿದ್ದಲ್ಲಿ ಮಾತ್ರ)

ಅಭ್ಯರ್ಥಿಯ ಸಹಿ

ಸಾಕ್ಷಿಗಳ ಸಹಿ ಮತ್ತು ಪೂರ್ಣ ಅಂಚೆ ವಿಳಾಸ

1.

2.

3.

## ತರಬೇತಿ ಕಾರ್ಯಕ್ರಮದ ಷರತ್ತು/ನಿಬಂಧನೆಗಳು

1. ಅರ್ಜಿಗಳನ್ನು ಇಲಾಖೆಯ ವೆಬ್‌ಸೈಟ್ www.horticulture.kar.nic.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದೃಢೀಕರಣ, ಸರ್ಟಿಫಿಕೇಟ್ ಮತ್ತು **2 ಕಲರ್ ಪಾಸಪೋರ್ಟ್‌ಸೈಜ್ ಪೋಟೋಗ**ಳ ಸಹಿತವಾಗಿ ದಿನಾಂಕ: 24-04-2018 ರೊಳಗೆ ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು, (ಜಿ.ಪಂ) ಇವರ ಕಛೇರಿಗೆ ಸಲ್ಲಿಸಬೇಕು.

2. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವಾಗ ಅರ್ಜಿ ಶುಲ್ಕದ ಬಾಬ್ತು **ಸಾಮಾನ್ಯ ಅಭ್ಯರ್ಥಿಗಳಿಗೆ ರೂ.30/- ಮತ್ತು ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ರೂ.15/-ಗಳನ್ನು** ನಿಗದಿಪಡಿಸಲಾಗಿದ್ದು, ಈ ಮೊತ್ತವನ್ನು ಇಂಡಿಯನ್ ಪೋಸ್ಟಲ್ ಆರ್ಡರ್ (IPO)/ ಡಿಮ್ಯಾಂಡ್ ಡ್ರಾಫ್ಟ್ (DD) ರೂಪದಲ್ಲಿ ಆಯಾಯ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರ ಹೆಸರಿನಲ್ಲಿ ಪಡೆದು, ಅರ್ಜಿಯ ಜೊತೆಗೆ ಲಗತ್ತಿಸಬೇಕು.

3. **ವಿದ್ಯಾರ್ಹತೆ:** ಕನ್ನಡ ವಿಷಯಗಳೊಂದಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

4. ಈ ತರಬೇತಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಕನ್ನಡದಲ್ಲಿ ಮಾತ್ರ ಹೇಳಲಾಗುವುದು. ಆದ್ದರಿಂದ ಅಭ್ಯರ್ಥಿಯು ಕನ್ನಡ ಓದುವುದು, ಬರೆಯುವುದು ಹಾಗೂ ಮಾತನಾಡುವುದನ್ನು ತಿಳಿದಿರಬೇಕು.

5. **ವಯೋಮಿತಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕನಿಷ್ಟ 18 ವರ್ಷ ಮತ್ತು ಗರಿಷ್ಟ 33 ವರ್ಷ ಮತ್ತು ಇತರರಿಗೆ ಕನಿಷ್ಟ 18 ವರ್ಷ ಮತ್ತು ಗರಿಷ್ಟ 30 ವರ್ಷ.

6. ಈ ತರಬೇತಿಯು ರೈತರ ಮಕ್ಕಳಿಗಾಗಿ ಇರುವುದರಿಂದ ಅಭ್ಯರ್ಥಿಯ ತಂದೆ ಅಥವಾ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು. ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಅಭ್ಯರ್ಥಿಗಳು ತೋಟದ ಕೆಲಸಗಳನ್ನು ಮಾಡುವಷ್ಟು ದೃಢಕಾಯರಾಗಿರಬೇಕು.

7. ತಮ್ಮ ಸ್ವಂತ ತೋಟಗಳನ್ನು ಅಭಿವೃದ್ಧಿಪಡಿಸಬೇಕೆಂಬ ಅಭಿಲಾಷೆಯುಳ್ಳ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

8. ಅರ್ಜಿಯಲ್ಲಿ ಕೇಳಿರುವ ಎಲ್ಲಾ ವಿಷಯಗಳಿಗೂ ಪೂರ್ಣವಾದ ಮತ್ತು ಸರಿಯಾದ ವಿವರಣೆಯನ್ನು ಕೊಡಬೇಕು. 3ನೇ, 7ನೇ ಮತ್ತು 8ನೇ ಕಾಲಂಗಳಿಗೆ ಅಗತ್ಯವಾಗಿ ಬೇಕಾದ ಸರ್ಟಿಫಿಕೇಟ್‌ಗಳನ್ನು ಲಗತ್ತಿಸಬೇಕು. ಇಲ್ಲದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

9. ಈ ತರಬೇತಿಯ ಕಾಲಾವಧಿ 10 ತಿಂಗಳು. ತರಬೇತಿಯು ದಿನಾಂಕ: 02-05-2018 ರಿಂದ ಪ್ರಾರಂಭವಾಗಿ 28-02-2019ಕ್ಕೆ ಅಂತ್ಯಗೊಳ್ಳುವುದು.

10. **ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ರೂ.1,250/-ಗಳ ಮಾಸಿಕ ಶಿಷ್ಯವೇತನ ನೀಡಲಾಗುವುದು.**

.... ಮು.ತಿ.ನೋ.

11. ಪ್ರತಿ ವಿದ್ಯಾರ್ಥಿಯೂ ತಮ್ಮ ಸ್ವಂತ ಖರ್ಚಿನಲ್ಲಿ ಎರಡು ಜೊತೆ ಹಸಿರು ಬಣ್ಣದ ಸಮವಸ್ತ್ರಗಳನ್ನು ಹೊಲಿಸಿಕೊಂಡು ತರಬೇತಿ ಸಮಯದಲ್ಲಿ ಕಡ್ಡಾಯವಾಗಿ ಧರಿಸಿಕೊಳ್ಳಬೇಕು.
12. ಅಂತಿಮ ಪರೀಕ್ಷೆಗೆ ಕುಳಿತುಕೊಳ್ಳಲು ಕನಿಷ್ಟ ಶೇಕಡ 75% ರಷ್ಟು ಹಾಜರಾತಿ ಇರಲೇಬೇಕು. **(ವೈದ್ಯಕೀಯ ಆಧಾರದ ಮೇಲೆ ಗರಿಷ್ಠ 30 ದಿನಗಳು ವಿನಾಯಿತಿ ಪಡೆಯಬಹುದು)**.
13. ತರಬೇತಿ ಸಮಯದಲ್ಲಿ ಯಾವುದೇ ವಿದ್ಯಾರ್ಥಿಯಲ್ಲಿ ಅಶಿಸ್ತು, ದುರ್ನಡತೆಗಳು, ದುಶ್ಚಟಗಳು (ಮಧ್ಯಪಾನ, ಧೂಮಪಾನ, ಇತ್ಯಾದಿ) ಕಂಡುಬಂದಲ್ಲಿ ಯಾವುದೇ ರೀತಿಯ ಸಮಜಾಯಿಷಿಯನ್ನು ನೀಡದೇ ತರಬೇತಿಯಿಂದ ಹೊರಗೆ ಹಾಕಲಾಗುವುದು.
14. ಅಭ್ಯರ್ಥಿಯು ತರಬೇತಿಯ ಮಧ್ಯದಲ್ಲಿ ಬಿಟ್ಟು ಹೋದರೆ ಅದುವರೆಗೂ ಪಡೆದಿರುವ ಶಿಷ್ಯ ವೇತನವನ್ನು ಹಿಂದಿರುಗಿಸಬೇಕಾಗುತ್ತದೆ.
15. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳು ಮೊಬೈಲ್ ಫೋನನ್ನು ಬಳಸುವಂತಿಲ್ಲ.
16. ಸರ್ಕಾರದ ಮೀಸಲಾತಿ ನಿಯಮಾವಳಿಗಳನ್ನು ಪಾಲಿಸಿ, ಮೆರಿಟ್ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆ ಕೈಗೊಳ್ಳಲಾಗುವುದು.

# ತೋಟಗಾರಿಕೆ ತರಬೇತಿ ಕೇಂದ್ರದಲ್ಲಿನ ವಿದ್ಯಾರ್ಥಿ ನಿಲಯದ ನಿಯಮಗಳು

1. ತೋಟಗಾರಿಕೆ ತರಬೇತಿ ಕೇಂದ್ರದಲ್ಲಿನ ವಿದ್ಯಾರ್ಥಿ ನಿಲಯವನ್ನು ತೋಟಗಾರಿಕೆ ತರಬೇತಿ ವಿದ್ಯಾರ್ಥಿಗಳ ಊಟ ಮತ್ತು ವಸತಿ ಸೌಕರ್ಯಗಳಿಗಾಗಿಯೇ ತೆರೆಯಲಾಗಿದೆ.
2. ಈ ವಿದ್ಯಾರ್ಥಿ ನಿಲಯದ ಪೂರ್ಣ ಆಡಳಿತವು ಸಹಾಯಕ ತೋಟಗಾರಿಕೆ ನಿರ್ದೇಶಕರು, ತರಬೇತಿ ಕೇಂದ್ರ ಇವರಿಗೆ ಸೇರಿದ್ದು, ವಸತಿ ಗೃಹದಲ್ಲಿ ಸ್ಥಳಗಳನ್ನು ಹಂಚುವ ಹಕ್ಕನ್ನು ಸಹಾಯಕ ತೋಟಗಾರಿಕೆ ನಿರ್ದೇಶಕರು ಇವರಿಗೆ ಕಾಯ್ದಿರಿಸಲಾಗಿದೆ ಮತ್ತು ಯಾವ ವಿದ್ಯಾರ್ಥಿಯೂ ಅವರ ಅನುಮತಿಯಿಲ್ಲದೇ ಹಂಚಿಕೆ ಮಾಡಿದ ಸ್ಥಳವನ್ನಾಗಲೀ, ವಸತಿಯನ್ನಾಗಲೀ ಬದಲಾಯಿಸಲು ಅವಕಾಶವಿರುವುದಿಲ್ಲ.
3. ಊಟಕ್ಕೆ ನಿಗಧಿತವಾದ ವೇಳೆಯನ್ನು ಎಲ್ಲಾ ವಿದ್ಯಾರ್ಥಿಗಳೂ ಕಟ್ಟುನಿಟ್ಟಾಗಿ ಅನುಸರಿಸಬೇಕು. ಇಲ್ಲದಿದ್ದಲ್ಲಿ ಅಂದಿನ ಊಟದ ಲಭ್ಯತೆ ಇರುವುದಿಲ್ಲ.
4. ಪ್ರತಿ ವಿದ್ಯಾರ್ಥಿಯೂ ರೂ.1,000/–ಗಳನ್ನು ಮುಂಗಡವಾಗಿ ಭದ್ರತಾ ಠೇವಣಿಯಾಗಿ ಕಟ್ಟಬೇಕು. ತರಬೇತಿ ಮುಗಿದ ನಂತರ ಈ ಹಣವನ್ನು ಹಿಂದಿರುಗಿಸಲಾಗುವುದು.
5. ಪ್ರತಿ ವಿದ್ಯಾರ್ಥಿಯೂ ತಮ್ಮ ವಸತಿ ಗೃಹವನ್ನು ಸದಾ ನಿರ್ಮಲವಾಗಿಯೂ, ಚೊಕ್ಕಟವಾಗಿಯೂ ಇಟ್ಟುಕೊಳ್ಳಬೇಕು.
6. ಯಾವ ವಿದ್ಯಾರ್ಥಿಯೂ ತರಬೇತಿ ಅವಧಿಯಲ್ಲಿ ವಿದ್ಯಾರ್ಥಿ ನಿಲಯದಿಂದ ಹೊರಗೆ ವಾಸಿಸಲು ಅವಕಾಶವಿರುವುದಿಲ್ಲ.
7. ವಿದ್ಯಾರ್ಥಿಗಳು ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರಲ್ಲಿಯೂ ವಿನಯವಾಗಿ ನಡೆದುಕೊಳ್ಳಬೇಕು.
8. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ದಿನಚರಿ ಪುಸ್ತಕವನ್ನು ಇಟ್ಟುಕೊಳ್ಳಬೇಕು. ದಿನಚರಿ ಪುಸ್ತಕವನ್ನು ಪ್ರತಿನಿತ್ಯ ಬರೆದು ಪ್ರತಿ ತಿಂಗಳೂ ಸಹಾಯಕ ತೋಟಗಾರಿಕೆ ನಿರ್ದೇಶಕರು (ತರಬೇತಿ ಕೇಂದ್ರ)ರವರ ಸಹಿ ಪಡೆಯಬೇಕು.
9. ವಸತಿ ಸೌಕರ್ಯವನ್ನು ಹೊರತುಪಡಿಸಿ, ಪ್ರತಿ ತಿಂಗಳೂ ಊಟಕ್ಕೆ ತಗಲುವ ವೆಚ್ಚವನ್ನು ಪ್ರತಿ ಮಾಹೆಯ ಶಿಷ್ಯವೇತನದ ಮೊತ್ತದಲ್ಲಿ ಕಡಿತಗೊಳಿಸಿ, ಉಳಿದ ಹಣವನ್ನು ವಿದ್ಯಾರ್ಥಿಗಳ ಹಾಜರಾತಿಯ ಆಧಾರದ ಮೇಲೆ ಅವರಿಗೆ ಹಂಚಲಾಗುವುದು.
10. ಯಾವ ವಿದ್ಯಾರ್ಥಿಯೂ ರಾತ್ರಿ 7.00 ಗಂಟೆಯ ನಂತರ ವಿದ್ಯಾರ್ಥಿ ನಿಲಯದಿಂದ ಹೊರಗಡೆ ಇರಲು ಅವಕಾಶವಿರುವುದಿಲ್ಲ.
11. ಯಾವುದೇ ವಿದ್ಯಾರ್ಥಿಯು ದುರ್ನಡತೆಯಿಂದ, ದುರಭಿಪ್ರಾಯದಿಂದಾಗಲೀ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
12. ಸರ್ಕಾರಿ ಆಸ್ತಿ ಪಾಸ್ತಿಗಳಿಗೆ ವಿದ್ಯಾರ್ಥಿಗಳಿಂದ ನಷ್ಟ ಉಂಟಾದ ಪಕ್ಷದಲ್ಲಿ ಅಂತಹ ನಷ್ಟಗಳಿಗೆ ಕಾರಣರಾದ ವಿದ್ಯಾರ್ಥಿಗಳಿಂದ ನಷ್ಟದ ಹಣವನ್ನು ವಸೂಲಿ ಮಾಡಲಾಗುವುದು.

**ಓದಿ ತಿಳಿದಿದ್ದೇನೆ**

**ಅಭ್ಯರ್ಥಿಯ ತಂದೆ/ತಾಯಿ ಅಥವಾ**
**ಪೋಷಕರ ಸಹಿ (ತಂದೆ/ತಾಯಿ ಇಲ್ಲದಿದ್ದಲ್ಲಿ ಮಾತ್ರ)**

**ಅಭ್ಯರ್ಥಿಯ ಸಹಿ**

# ಹಿಡುವಳಿ ದೃಢೀಕರಣ ಪತ್ರ

2018–2019ನೇ ಸಾಲಿನ ತೋಟಗಾರಿಕೆ ತರಬೇತಿಗೆ ಅರ್ಜಿ ಹಾಕಿಕೊಳ್ಳುತ್ತಿರುವ ಶ್ರೀ.............................. .............. ............................................ ಇದೇ ಹೆಸರಿನಲ್ಲಿ/ ತಂದೆ ಹೆಸರಿನಲ್ಲಿ / ತಾಯಿ ಹೆಸರಿನಲ್ಲಿ ಅಥವಾ ಪೋಷಕರ ಹೆಸರಿನಲ್ಲಿ ಈ ಕೆಳಕಂಡಂತೆ ಜಮೀನುಗಳು ಇರುತ್ತವೆಂದು ದೃಢೀಕರಿಸಲಾಗಿದೆ.

| ಕ್ರ. ಸಂ. | | | |
|---|---|---|---|
| 1. | ತಂದೆಯ ಹೆಸರಿನಲ್ಲಿ | | |
| 2. | ತಾಯಿಯ ಹೆಸರಿನಲ್ಲಿ | | |
| 3. | ಪೋಷಕರ ಹೆಸರಿನಲ್ಲಿ | | |
| | ಒಟ್ಟು ವಿಸ್ತೀರ್ಣ | | |

**ಸೂಚನೆ:-**

ಪೋಷಕರ ಹೆಸರಿನಲ್ಲಿದ್ದರೆ ಯಾವ ರೀತಿಯಲ್ಲಿ ಪೋಷಕರೆಂಬುದನ್ನು ಗ್ರಾಮ ಲೆಕ್ಕಾಧಿಕಾರಿಗಳು ದೃಢೀಕರಿಸಬೇಕು.

**ಗ್ರಾಮ ಲೆಕ್ಕಾಧಿಕಾರಿಗಳ ಸಹಿ ಮತ್ತು**
**ಪದನಾಮ ಮೊಹರು**